# ಒಂದೆರಡು ಮಾತುಗಳು
# ಮಹಾತ್ಮಾ ಜ್ಯೋತಿಬಾ ಫುಲೆ
# ಜನ್ಮದಿನ ಪ್ರಯುಕ್ತ

1. ಮಹಾತ್ಮಾ ಜ್ಯೋತಿಬಾ ಫುಲೆ ಅವರ ಜನ್ಮದಿನ ಇಂದು (11 ಏಪ್ರಿಲ್). ವಾಟ್ಸ್ಯಾಪ್‌ನಲ್ಲಿ ಈ ಕುರಿತು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಹಲವು ಸಂದೇಶಗಳು ಫಾರ್ವರ್ಡ್ ಆಗುತ್ತಿವೆ. ಒಂದೆರಡು ಹಿಂದಿ ಮತ್ತು ಮರಾಠಿ ಸಂದೇಶಗಳೂ ನನ್ನ ಮೊಬೈಲ್‌ಗೆ ಬಂದವು. ಎಲ್ಲವೂ ಉತ್ತಮ ಸಂದೇಶ ಆಗಿದ್ದವು. ಇದಕ್ಕಾಗಿ ನಾನು ಸಂತೋಷಪಡುತ್ತೇನೆ ಮತ್ತು ಅವರೆಲ್ಲರಿಗೆ ಈ ಮೂಲಕ ನನ್ನ ಧನ್ಯವಾದಗಳನ್ನು ತಿಳಿಸುತ್ತೇನೆ.

ಅವುಗಳಲ್ಲಿ, ಬೆಂಗಳೂರಿನ ಪಶುವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಡಾ॥ ಎಂ.ನಾರಾಯಣಸ್ವಾಮಿ ಅವರ

ಶಿಕ್ಷಣ ಇಲ್ಲದೆ ಜ್ಞಾನವನ್ನು ಕಳೆದುಕೊಂಡೆವು; ಜ್ಞಾನ ಇಲ್ಲದೆ ವಿವೇಚನೆಯನ್ನು ಕಳೆದುಕೊಂಡೆವು; ವಿವೇಚನೆ ಇಲ್ಲದೆ ಅಭಿವೃದ್ಧಿ ಹೊಂದುವ ಅವಕಾಶವನ್ನು ಕಳೆದುಕೊಂಡೆವು; ಅಭಿವೃದ್ಧಿ ಇಲ್ಲದೆ ಸಂಪತ್ತನ್ನು ಹೊಂದುವುದು ನಮಗೆ ಸಾಧ್ಯವಾಗಲಿಲ್ಲ; ಸಂಪತ್ತು ಇಲ್ಲದೆ ನಮ್ಮ ಬದುಕು ಸರ್ವನಾಶವಾಯಿತು; ಇಷ್ಟೆಲ್ಲಕ್ಕೂ ನಾವು ಶಿಕ್ಷಣ ಪಡೆಯಲು ಸಾಧ್ಯವಾಗದ್ದರಿಂದಲೇ ಸಂಭವಿಸಿತು.

ಎಂಬ ಮಾತು ನಮ್ಮ ಹೃದಯವನ್ನು ಮುಟ್ಟಬೇಕಿದೆ.

2. ಹೌದು. ಶಿಕ್ಷಣವನ್ನು ಪಡೆದುಕೊಳ್ಳುವ ಹಕ್ಕನ್ನು ನಮಗೆ ನಿರಾಕರಿಸಲಾಯಿತು. ಆದುದರಿಂದ ನಮ್ಮ ಬದುಕು ಮೂರಾಬಟ್ಟೆ ಆಯಿತು.

3. ಇದು ಭಾರತದ **ಎಲ್ಲಾ ಬಹುಜನರಿಗೆ** ಮನವರಿಕೆ ಇನ್ನೂ ಆಗಿಲ್ಲ ಎಂದರೂ, **ಕೋಟ್ಯಂತರ ಬಹುಜನರಿಗೆ** ಮನವರಿಕೆ ಆಗಿದೆ.

ಎ) ಇವರಲ್ಲಿ ಕೆಲವರು ಬೇಗ ಮನವರಿಕೆ ಮಾಡಿಕೊಂಡು, ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದಾರೆ.

ಬಿ) ಇನ್ನೂ ಕೆಲವರು ನಿಧಾನವಾಗಿ ಮನವರಿಕೆ ಮಾಡಿಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದಾರೆ.

ಸಿ) ಮತ್ತೂ ಕೆಲವರು ಈಗಷ್ಟೇ ಇದನ್ನು ಅರ್ಥ ಮಾಡಿ ಕೊಳ್ಳುತ್ತಿದ್ದು, ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ.

ಡಿ) ಉಳಿದವರು ಈಗಲೂ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಬಯಸಿದ್ದರೂ, ಅವರಿಗೆ ಮಾರ್ಗದರ್ಶನ ದೊರಕುತ್ತಿಲ್ಲ ಹಾಗೂ ನೆರವು ದೊರಕುತ್ತಿಲ್ಲ. ಸರ್ಕಾರ ಕೊಡುತ್ತಿರುವ ನೆರವು ಸಾಕಾಗುತ್ತಿಲ್ಲ.

ಇ) ಬೇರೆ ಅನೇಕರು ಇನ್ನೂ ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿಕೊಂಡಿಲ್ಲ.

4. ಇಂಥ ಪರಿಸ್ಥಿತಿ ಇರುವುದನ್ನು ಬಹುತೇಕವಾಗಿ ಯಾರೂ ನಿರಾಕರಿಸುವುದಿಲ್ಲ. ಆದರೆ, ಇಷ್ಟನ್ನು ತಿಳಿದುಕೊಂಡು, ಸುಮ್ಮನೇ ಇರುವವರೇ ಹೆಚ್ಚು.

5. ಇಲ್ಲಿ (ಸಿ) ಗುಂಪಿನಲ್ಲಿ ಇರುವವರ ವಿಷಯದಲ್ಲಿ ನಾನು ಹೆಚ್ಚು ಮಾತನಾಡಲು ಇಚ್ಛಿಸುವುದಿಲ್ಲ. ಏಕೆಂದರೆ, ಅವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಅವರಿಗೆ ಯಶಸ್ಸು ದೊರಕಲಿ ಎಂದು ನನ್ನಂಥವರು ಹಾರೈಸಬಹುದು, ಅಷ್ಟೇ.

6. ಆದರೆ, (ಎ) ಮತ್ತು (ಬಿ) ಗುಂಪಿನಲ್ಲಿ ಇರುವವರು, ತಮ್ಮ ಕರ್ತವ್ಯವನ್ನು ಮಾಡುತ್ತಿರುವುದು, ಅವರು (ಡಿ)ರಲ್ಲಿ ಇರುವವರಿಗೆ ನೆರವು ಮತ್ತು ಮಾರ್ಗದರ್ಶನ ನೀಡುತ್ತಿರುವುದು ನನಗೆ ಕಂಡು ಬರುತ್ತಿಲ್ಲ.

ನಾನು ಕೂಡ ಈ (ಎ) ಮತ್ತು (ಬಿ) ಗುಂಪಿಗೇ ಸೇರಿರುವವ. ನನ್ನಂಥವರು ಅನೇಕರು ಒಗ್ಗೂಡಬೇಕಲ್ಲವೆ? ಧೃಡವಾಗಿ ಮತ್ತು ನಿರಂತರವಾಗಿ ಇವರಿಗೆ ನೆರವು ಮತ್ತು ಮಾರ್ಗದರ್ಶನ ನೀಡುತ್ತಿರ ಬೇಕಲ್ಲವೆ?

6 ಇನ್ನು (ಇ) ಗುಂಪಿನಲ್ಲಿ ಇರುವವರ ಬಗ್ಗೆ ಆದ್ಯ ಗಮನವನ್ನು ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದೂ (ಎ) ಮತ್ತು (ಬಿ) ಗುಂಪುಗಳಿಗೆ ಸೇರಿರುವ ನನ್ನಂಥವರ ಆದ್ಯ ಕರ್ತವ್ಯ. ಇದನ್ನೂ ನಾವು ಮಾಡಬೇಕು.

ಇದಕ್ಕಾಗಿ ನಾವು –ವಿಶೇಷವಾಗಿ ನಿಶ್ಚಿತ ವೇತನ, ಆದಾಯ ಪಡೆಯುತ್ತಿರುವವರು ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವ ಕಡೆ ನಿರ್ಲಕ್ಷ್ಯ ತೋರುವುದು ಖಂಡಿತಕ್ಕೂ ಅಪರಾಧವಾಗುತ್ತದೆ.

* * *

(ಎ) ಮತ್ತು (ಬಿ) ಗುಂಪಿನಲ್ಲೇ ಇರುವ ನಾವು ಮತ್ತೆ ಮತ್ತೆ ಮಹಾತ್ಮಾ ಜ್ಯೋತಿಬಾ ಫುಲೆ, ಬಾಬಾಸಾಹೇಬ್ ಅಂಬೇಡ್ಕರ್ ಮುಂತಾದವರ ಹೆಸರು, ಫೋಟೋ, ಹಾಕುತ್ತಾ, ಅದನ್ನೇ ಮಹಾಕಾರ್ಯ ಎಂದು ಸಂಭ್ರಮಿಸುತ್ತಾ ಹೋಗುತ್ತಿದ್ದೇವೆ. ಇದು ಕೂಡ ಒಂದು ರೀತಿಯಲ್ಲಿ ಢಂಬಾಚಾರ ಅಲ್ಲವೆ? ಈ ಕುರಿತು ನಾವು ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ ಅಲ್ಲವೆ?

**ಮಂಗ್ಳೂರ ವಿಜಯ**
94491.–02294